**ಸಿ. ಸಿ. ನಂ. 153/2017**

**ಪಿ ಡಬ್ಲ್ಯೂ: 1**

**ಸಾಕ್ಷಿಯು ದಿನಾಂಕಃ** 24-01-2025 **ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು**.

**<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಸಿ ಪಿ ವಾಯ್., ವಕೀಲರಿಂದ</u>**

ನಾನು ಪಿಯುಸಿಯವರಗೆ ಓದಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ಆರೋಪಿ ರೂಟ್ ಕೆನಾಲ್ ಮಾಡಲು ಮತ್ತು ಹಲ್ಲಿಗೆ ಕ್ಯಾಪ್ ಹಾಕಲು **4** ಸಿಟ್ಟಿಂಗ್ ಗಳು ಬೇಕಾಗುತ್ತವೆ ಎಂದು ತಿಳಿಸಿದ್ದರು. ಆ ರೀತಿ **2-3** ದಿನಕ್ಕೆ **1** ಸಿಟ್ಟಿಂಗ್ ಮಾಡಬೇಕು ಎಂದು ತಿಳಿಸಿದ್ದರು. ನಾನು ಆರೋಪಿಯ ಕ್ಲಿನಿಕ್ ನಲ್ಲಿ ಸುಮಾರು **3** ತಿಂಗಳುಗಳ ಕಾಲ ಚಿಕಿತ್ಸೆಯನ್ನು ಪಡೆದಿರುತ್ತೇನೆ. ರೂಟ್ ಕೆನಾಲ್ ಚಿಕಿತ್ಸೆ ಮುಕ್ತಾಯ ಆಗಿರಲಿಲ್ಲ. ಸಾಕ್ಷಿ ಮುಂದುವರೆದು ಪ್ರತಿದಿನ ನೋವು ಹೆಚ್ಚಾಗುತ್ತಿತ್ತು ಎಂದು ನುಡಿಯುತ್ತಾರೆ. ನನಗೆ ಮೇ - **2016** ರಲ್ಲಿ ಹಲ್ಲಿನ ನೋವು **5** ನೇ ಸಿಟ್ಟಿಂಗ್ ನಂತರ ಹೆಚ್ಚಾಗಿ ಕಂಡು ಬಂತು. ಸಾಕ್ಷಿ ಮುಂದುವರೆದು, ನಾನು ದಿಃ **10-05-2016** ಕ್ಕೆ ಎಸ್ ಡಿ ಎಂ ಆಸ್ಪತ್ರೆಗೆ ಹೋದೆ ಎಂದು ನುಡಿಯುತ್ತಾರೆ. ಸದರಿ ಆಸ್ಪತ್ರೆಯಲ್ಲಿ ನನಗೆ ಆಗಲೇ ಚಿಕಿತ್ಸೆ ಪ್ರಾರಂಭ ಮಾಡಿದರು ಅಂದರೆ ಸರಿ.

ನಾನು ಎಸ್ ಡಿ ಎಂ ಆಸ್ಪತ್ರೆಗೆ ಹೋದಾಗ ಅಂದರೆ ದಿಃ **10-05-2016** ರಂದು ವೈದ್ಯರು ಹಲ್ಲಿನಲ್ಲಿ ಉಪಕರಣದ ತುಂಡೊಂದು ಇರುವ ಬಗ್ಗೆ ತಿಳಿಸಿದ ತಕ್ಷಣ ನಮ್ಮ ಠಾಣೆಯಲ್ಲಿ ವಿಷಯ ತಿಳಿಸಿದ್ದೆ. ನಾನು ಲಿಖಿತ ರೂಪದಲ್ಲಿ ಠಾಣೆಗೆ ದೂರನ್ನು ನೀಡಿರುತ್ತೇನೆ.

**ಸಿ. ಸಿ. ನಂ. 153/2017**

**ಪಿ ಡಬ್ಲ್ಯೂ 1**

ನಾನು ದೂರು ನೀಡಿದ ನಂತರ ಎಫ್ ಐ ಆರ್ ಆಗಿರಲಿಲ್ಲ. ಸಾಕ್ಷಿ ಮುಂದುವರೆದು ಡಿಪಿ ಪ್ರಕರಣ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು ನಾನು ದೂರು ನೀಡಿದ ತಕ್ಷಣ ಡಿ ಪಿ ಮಾಡಿರಲಿಲ್ಲ ಮತ್ತು ದಿಃ **23-06-2016** ಕ್ಕೆ ಡಿಪಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವಂತೆ ಕೇಳಿಕೊಂಡರೂ ಸಹ ಮೇಲಾಧಿಕಾರಿಗಳು ದಾಖಲು ಮಾಡಿರುವುದಿಲ್ಲ. ನಾನು ಪ್ರಥಮ ವರ್ತಮಾನ ವರದಿ ದಾಖಲಾಗದಿದ್ದ ಕಾರಣ ನಾನು ವಿಚಾರವನ್ನು ಡಿ ವಾಯ್ ಎಸ್ ಪಿ ರವರಿಗೆ ವಿಷಯ ತಿಳಿಸಿದ್ದೆ. ಆ ರೀತಿ ಡಿ ವಾಯ್ ಎಸ್ ಪಿ ರವರಿಗೆ ಮೌಖಿಕವಾಗಿ ತಿಳಿಸಿದ್ದೆ. ನಾನು ದೂರನ್ನು ಡಿ ವಾಯ್ ಎಸ್ ಪಿ ರವರಿಗೆ ನೀಡಿರಲಿಲ್ಲ. ದೂರನ್ನು ಹೊಸಪೇಟೆ ಪಟ್ಟಣ ಪೋಲಿಸ ಠಾಣೆಯ ಠಾಣಾಧಿಕಾರಿಗೆ ನೀಡಿರುತ್ತೇನೆ. ನನ್ನ ದೂರಿನಲ್ಲಿ ಡಿ ವಾಯ್ ಎಸ್ ಪಿ ರವರಿಗೆ ಎಂದು ನಮೂದು ಮಾಡಲಾಗಿದೆ ಅಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮೊದಲಿಗೆ ದೂರನ್ನು ಡಿ ವಾಯ್ ಎಸ್ ಪಿ ನೀಡಿದ್ದೆ ಎಂದು ನುಡಿಯುತ್ತಾರೆ. ನಾನು ಡಿ ವಾಯ್ ಎಸ್ ಪಿ ರವರಿಗೆ ದೂರು ನೀಡಿದ ನಂತರ ಹೊಸಪೇಟೆ ಪಟ್ಟಣ ಪೋಲಿಸ ಠಾಣೆಗೆ ಬಂದು ಇನ್ನೊಂದು ದೂರನ್ನು ನೀಡಿರುವುದಿಲ್ಲ. ನಾನು ಠಾಣಾಧಿಕಾರಿಯ ಮುಂದೆ ಆ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ.

ನಾನು ಎಸ್ ಡಿ ಎಂ ಆಸ್ಪತ್ರೆ, ಧಾರವಾಡದಲ್ಲಿ 2 ತಿಂಗಳ ಅವಧಿಯಲ್ಲಿ 4 ಸಿಟ್ಟಿಂಗ್ ಗಳಲ್ಲಿ ಚಿಕಿತ್ಸೆಯನ್ನು ಪಡೆದಿರುತ್ತೇನೆ. ಸದರಿ ಆಸ್ಪತ್ರೆಯವರು ಸ್ಕ್ಯಾನ್ ಮಾಡಿದ್ದ ಬಗ್ಗೆ ದಾಖಲೆಗಳನ್ನು ಮತ್ತು ವರದಿಯನ್ನು ನನಗೆ ಕೊಟ್ಟಿದ್ದರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವರದಿಯಲ್ಲಿ ಹಲ್ಲಿನಲ್ಲಿ ಸೂಜಿ 2 ಬಾರಿ ಮುರಿದಿರುತ್ತದೆ ಎಂದು ಬರೆದಿರುತ್ತಾರೆ.

ನಾನು ಎಸ್ ಡಿ ಎಂ ಆಸ್ಪತ್ರೆಗೆ ಹೋಗುವುದಕ್ಕೂ ಮೊದಲು ಹೊಸಪೇಟೆಯು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೋಗಿದ್ದೆ. ಸಾಕ್ಷಿ ಮುಂದುವರೆದು ಸರ್ಕಾರಿ ಆಸ್ಪತ್ರೆಯವರೇ ಹಲ್ಲಿನಲ್ಲಿ ಸೂಜಿ ಮುರಿದಿರುವುದು ತಿಳಿಸಿ ಹೆಚ್ಚಿನ ಚಿಕಿತ್ಸೆಗೆ ಬೇರೆ ಕಡೆ ತೋರಿಸಿ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಸರ್ಕಾರಿ ಆಸ್ಪತ್ರೆಯವರು ಎಂ ಎಲ್ ಸಿ ಮಾಡಿ ಠಾಣೆಗೆ ಮಾಹಿತಿ ನೀಡಿರುವುದಿಲ್ಲ. ನಾನು ಸರ್ಕಾರಿ ಆಸ್ಪತ್ರೆಯ ವೈದ್ಯರಿಗೆ ಹಲ್ಲಿನಲ್ಲಿ ಬಹಳ ನೋವಿದೆ ಎಂದು ತಿಳಿಸಿದ್ದೆ. ಯಾವುದೇ ವೈದ್ಯರ ಬಗ್ಗೆ ಅವರ ಮುಂದೆ ಆರೋಪಗಳನ್ನು ಮಾಡಿರಲಿಲ್ಲ. ನಾನು ದೂರು ನೀಡಿದ ನಂತರ ಆರೋಪಿಯನ್ನು ಪೋಲಿಸ ಠಾಣೆಗೆ ಕರೆಸಿರಲಿಲ್ಲ. ಆರೋಪಿ ನಾನು ಇಲ್ಲದಾಗ ಡಿ ಪಿ ಪ್ರಕರಣದಲ್ಲಿ ಪೋಲಿಸರ ಮುಂದೆ ಒಂದು ಹೇಳಿಕೆ ಬರೆದುಕೊಟ್ಟು ಹೋಗಿರುತ್ತಾರೆ. ನಾನು ಮಾಂಸಾಹಾರಿ ಇರುತ್ತೇನೆ.

ಆರೋಪಿ ಸರಿಯಾಗಿ ಚಿಕಿತ್ಸೆ ನೀಡಿದ್ದರೂ ಸಹ, ಅವರೊಂದಿಗೆ ವಿನಾಕಾರಣ ಗಲಾಟೆ ಮಾಡಿ ಅವರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ಅವರು ನೀಡಿದ ಚಿಕಿತ್ಸೆಯಿಂದ ನನಗೆ ಯಾವುದೇ ತೊಂದರೆಯಾಗಿರಲಿಲ್ಲ ಅಂದರೆ ಸರಿಯಲ್ಲ. ಧಾರವಾಡದ ಆಸ್ಪತ್ರೆಯವರು ರೂಟ್ ಕೆನಾಲ್ ಚಿಕಿತ್ಸೆ ಸಂಪೂರ್ಣವಾಗಿ ಆಗಿಲ್ಲ ಎಂದು ಮತ್ತು ಅವರ ಆಸ್ಪತ್ರೆಯಲ್ಲಿ ಸಂಪೂರ್ಣ ಚಿಕಿತ್ಸೆ ನೀಡಲಾಗಿದೆ ಎಂದು ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ ಅಂದರೆ ಸರಿ.

ನನ್ನ ದವಡೆ ಹಲ್ಲಿನಲ್ಲಿ ಮುರಿದ ಉಪಕರಣಗಳ ತುಂಡುಗಳು 2 ತಿಂಗಳುಗಳ ಕಾಲ ಇದ್ದವು. ಮೇಲಾಧಿಕಾರಿಗಳು ನಾನು ಸುಳ್ಳು ದೂರನ್ನು ನೀಡುತ್ತಿದ್ದೇನೆ ಎಂದು ಗೊತ್ತಿದ್ದರಿಂದ ದೂರು ನೀಡಬೇಡಿ ಎಂದು ಸಾಕಷ್ಟು ಬಾರಿ ನನಗೆ ತಿಳಿಸಿದ್ದರು ಅಂದರೆ ಸರಿಯಲ್ಲ. ಸದರಿಯವರು ಆ ರೀತಿ ತಿಳಿಸಿದ್ದರೂ ಸಹ ನಾನು ಆರೋಪಿಯ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ನಿಜಾಂಶ ಗೊತ್ತಿದ್ದರಿಂದ ನನ್ನ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿ ತಯಾರಿಸದೇ, ಸಾಕಷ್ಟು ದಿನಗಳ ನಂತರ ಡಿಪಿ ಪ್ರಕರಣವನ್ನು ದಾಖಲಿಸಿದ್ದರು ಅಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿ ಅನ್ಯಾಯ ಮಾಡುವುದು ಬೇಡ ಎಂದು ಪ್ರಕರಣ ದಾಖಲಿಸದಿದ್ದಾಗ, ನಾನು ಡಿ ವಾಯ್ ಎಸ್ ಪಿ ರವರ ಬಳಿ ಹೋಗಿ ಪ್ರಭಾವ ಬೀರಿ ದೂರನ್ನು ನೀಡಿ ಪ್ರಥಮ ವರ್ತಮಾನ ವರದಿಯನ್ನು ಮಾಡಿಸಿರುತ್ತೇನೆ ಅಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಬಂದು ದೂರು ಸಲ್ಲಿಸಬಹುದಿತ್ತು ಅಂದರೆ ಸರಿ. ಸಾಕ್ಷಿ ಮುಂದುವರೆದು, ಮೇಲಾಧಿಕಾರಿಗಳಿಗೆ ಹೇಳಲು ಸಹ ಅವಕಾಶ ಇದ್ದದ್ದರಿಂದ ಅವರಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಧಾರವಾಡದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಪೋಲಿಸರಿಗೆ ದೃಡೀಕೃತ ನಕಲುಗಳನ್ನು ನೀಡಿರಲಿಲ್ಲ ಅಂದರೆ ಸರಿಯಲ್ಲ. ನಾನು ಗ್ರಾಹಕರ ವೇದಿಕೆಯಲ್ಲಿ ದಾಖಲೆಗಳನ್ನು ಹಾಜರುಪಡಿಸಿ ಪರಿಹಾರವನ್ನು ಸಹ ಪಡೆದಿರುತ್ತೇನೆ ಅಂದರೆ ಸರಿ. ನಾನು ಸರ್ಕಾರಿ ನೌಕರಳಾಗಿರುವುದರಿಂದ ಬಿಲ್ಲಗಳ ಮೊತ್ತವನ್ನು ಈಗಾಗಲೇ ಸರ್ಕಾರದಿಂದ ಪಡೆದಿರುತ್ತೇನೆ ಅಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಎಸ್ ಪಿ ಕಚೇರಿಗೆ ನೀಡಿ ವೈದ್ಯಕೀಯ ಬಿಲ್ಲ ಗಳ ಕ್ಲೇಮ್ ಮಾಡಿರುವುದರಿಂದ ಪೋಲಿಸರಿಗೆ ಮತ್ತು ನ್ಯಾಯಾಲಯಕ್ಕೆ ಆ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ.

ನನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆಯನ್ನು ಮಾಡದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮುರಿದ ಉಪಕರಣಗಳ ತುಂಡುಗಳನ್ನು ಧಾರವಾಡದ ಆಸ್ಪತ್ರೆಯಿಂದ ತೆಗೆದುಕೊಂಡು ಬಂದು ಪೋಲಿಸರಿಗೆ ನೀಡಿಲ್ಲ. ಆ ರೀತಿ ಯಾವುದೇ ಉಪಕರಣದ ತುಂಡು ನನ್ನ ದವಡೆ ಹಲ್ಲಿನಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಕತೆ ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ.

ಆರೋಪಿ ಸಂಪೂರ್ಣವಾಗಿ ಚಿಕಿತ್ಸೆ ನೀಡಲು ತಯಾರಿದ್ದಾಗಲೂ ಸಹ, ನಾನು ಬೇರೆ ಬೇರೆ ಕಡೆಗಳಲ್ಲಿ ಚಿಕಿತ್ಸೆಯನ್ನು ಪಡೆದು ನಂತರ ಆರೋಪಿಯ ವಿರುದ್ಧ ಸುಳ್ಳು ಆರೋಪಿಗಳನ್ನು ಮಾಡುತ್ತಿದ್ದೇನೆ ಅಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಯ ತಪ್ಪು ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲಾ**.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.